ರಾಯಚೂರು ವಿಶ್ವವಿದ್ಯಾಲಯ
RAICHUR UNIVERSITY
ಯರಗೇರಾ–584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
https://raichuruniversity.ac.in ಆಡಳಿತ ವಿಭಾಗ registrarrur@gmail.com

ಕ್ರ.ಸಂ. ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/2022–23/ ದಿನಾಂಕ: 23/8/2022

ಗೆ
ಮಾನ್ಯ ಸಿಂಡಿಕೇಟ ಸದಸ್ಯರುಗಳು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

ಮಾನ್ಯರೇ,

ವಿಷಯ: ದಿನಾಂಕ: 23.08.2022ರಂದು ಮಧ್ಯಾಹ್ನ 12.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳು.

*****

ದಿನಾಂಕ: 23.08.2022ರಂದು ಮಧ್ಯಾಹ್ನ 12.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ
23/8/22
ಪ್ರೊ. ವಿಶ್ವನಾಥ ಎಂ.,
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಅಡಕ: ನಡಾವಳಿಗಳು.

ಪ್ರತಿಗಳು :

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
7. ಉಪ–ಕುಲಸಚಿವರು, ಆಡಳಿತ/ವಿದ್ಯಾಮಂಡಲ/ಪರೀಕ್ಷಾ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
8. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
9. ಕಛೇರಿ ಕಡತಕ್ಕೆ.

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

ಆಡಳಿತ ವಿಭಾಗ

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ 23.08.2022 ರಂದು ಮಂಗಳವಾರ ಮಧ್ಯಾಹ್ನಾ 12.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 1. | ಶ್ರೀ. ಶಿವಬಸಪ್ಪ, ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 2. | ಶ್ರೀ. ನಾಗೇಂದ್ರ ಪ್ರಸಾದ ಎ.ಎಂ., | ಸಿಂಡಿಕೇಟ್ ಸದಸ್ಯರು (ಆನ್‌ಲೈನ್ ಮುಖಾಂತರ ಸಭೆಗೆ ಹಾಜರಾಗಿದ್ದರು) |
| 3. | ಶ್ರೀ. ಜಗದೀಶ್ ಹೆಚ್.ಬಿನ್ ಅಮರಣ್ಣ, | ಸಿಂಡಿಕೇಟ್ ಸದಸ್ಯರು |
| 4. | ಶ್ರೀ. ಮೋಹನ್ ಕುಮಟಕರ್ | ಸಿಂಡಿಕೇಟ್ ಸದಸ್ಯರು (ಆನ್‌ಲೈನ್ ಮುಖಾಂತರ ಸಭೆಗೆ ಹಾಜರಾಗಿದ್ದರು) |
| 5. | ಶ್ರೀ. ಸಂಜಯ್ ಕುಮಾರ್ ಮೂಥಾ | ಸಿಂಡಿಕೇಟ್ ಸದಸ್ಯರು (ಆನ್‌ಲೈನ್ ಮುಖಾಂತರ ಸಭೆಗೆ ಹಾಜರಾಗಿದ್ದರು) |
| 6. | ಶ್ರೀಮತಿ ಕಾವೇರಿ ಕೇದಾರನಾಥ್ | ಸಿಂಡಿಕೇಟ್ ಸದಸ್ಯರು (ಆನ್‌ಲೈನ್ ಮುಖಾಂತರ ಸಭೆಗೆ ಹಾಜರಾಗಿದ್ದರು) |
| 7. | ಶ್ರೀ ಶಂಕರರೆಡ್ಡಿ ಜಿ., | ಸಿಂಡಿಕೇಟ್ ಸದಸ್ಯರು |
| 8. | ಪ್ರೊ. ಭಜಂತ್ರಿ ವೈ.ಎಂ., | ಸಿಂಡಿಕೇಟ್ ಸದಸ್ಯರು |
| 9. | ಪ್ರೊ. ಎಂ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 10. | ಡಾ. ರಾಘವೇಂದ್ರ ಫತೇಪೂರ; (ನಿರ್ದೇಶಕರು) ಸಿಡಿಸಿ | ವಿಶೇಷ ಆಹ್ವಾನಿತರು |
| 11. | ಪ್ರೊ. ವಿಶ್ವನಾಥ ಎಂ.ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಬವಾಯಿತು.

| ಕಲಂ / ಐಟಂ ನಂ | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 01 | 2022-23ರ ಶೈಕ್ಷಣಿಕ ಸಾಲಿಗಾಗಿ ನಡೆದ ಸಂಯೋಜನಾ ಪ್ರಕ್ರಿಯೆಯಲ್ಲಿ ಅಸ್ತಿತ್ವದಲ್ಲಿರುವ 15 ಸಂಯೋಜಿತ ಮಹಾವಿದ್ಯಾಲಯಗಳು ಪ್ರತಿಶತ 30ಕ್ಕಿಂತ ಕಡಿಮೆ ಅಂಕಗಳಿಸಿದ ಕಾರಣ ದಿನಾಂಕ: 22.07.2022ರಂದು ಜರುಗಿದ ಸಿಂಡಿಕೇಟ್ ಸಭೆಯ ತನಿಖಾ ಸಮಿತಿಗಳು ಭೌತಿಕ ಮರು ಪರಿಶೀಲನೆ ಮಾಡಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಮುಂದಿನ ಕ್ರಮದ ಬಗ್ಗೆ ಚರ್ಚೆ | ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿದಂತೆ, 15 ಮಹಾವಿದ್ಯಾಲಯಗಳ ಸ್ಥಳೀಯ ತನಿಖಾ ಸಮಿತಿ ಮರುಪರಿಶೀಲನಾ ವರದಿಯ ಅನುಸಾರ 2022-23ನೇ ಶೈಕ್ಷಣಿಕ ಸಾಲಿಗೆ ಎಲ್ಲಾ 15 ಮಹಾವಿದ್ಯಾಲಯಗಳಿಗೆ ಸಂಯೋಜನೆ ಮುಂದುವರಿಸಲು ಅನುಮೋದಿಸಲಾಯಿತು. |

| | | |
|---|---|---|
| 02 | ರಾಯಚೂರು ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಪರಿನಿಯಮಾವಳಿಗಳ ಕುರಿತು ಚರ್ಚೆ | ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿಯ ಅನುಮೋದನೆಯಂತೆ ರಾಯಚೂರು ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಯುಜಿಸಿ ಪರಿನಿಯಮಾವಳಿಗಳ ಮಾರ್ಗದರ್ಶನದಂತೆ ರಚಿಸಲಾದ ಬೋಧಕ ಹುದ್ದೆಗಳ ಪರಿನಿಯಮಾವಳಿಗಳನ್ನು ಅನುಮೋಧಿಸಲಾಯಿತು. |
| 03 | ರಾಯಚೂರು ವಿಶ್ವವಿದ್ಯಾಲಯದ 2021-22ನೇ ಸಾಲಿನಲ್ಲಿ ವಿವಿಧ ಅಧ್ಯಯನ ವಿಭಾಗಗಳಲ್ಲಿ ಬೋಧನಾ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವಧನವನ್ನು ಪಾವತಿಸುವ ಹಾಗೂ ಅವಶ್ಯವಿರುವ ವಿವಿಧ ಅಧ್ಯಯನ ವಿಭಾಗಗಳಿಗೆ ಎರಡನೇ ಸೆಮಿಸ್ಟರ್ ತರಗತಿಗಳಿಗೆ ಅತಿಥಿ ಉಪನ್ಯಾಸಕರಗಳನ್ನು ಬೋಧನಾ ಕಾರ್ಯಕ್ಕೆ ನಿಯೋಜಿಸುವ ಬಗ್ಗೆ ಚರ್ಚೆ | ರಾಯಚೂರು ವಿಶ್ವವಿದ್ಯಾಲಯದಲ್ಲಿ ಪ್ರಥಮ ಸೆಮಿಸ್ಟರ್‌ಗೆ ನೇಮಕಗೊಂಡಿರುವ ಸಂಭಾವನೆಯನ್ನು ಪಾವತಿಸುವುದಕ್ಕೆ ಸಂಬಂಧಿಸಿದಂತೆ, ಗುಲಬರ್ಗಾ ವಿಶ್ವವಿದ್ಯಾಲಯವು ಹೊರಡಿಸಿರುವ ಸಂಭಾವನೆಯ ಆದೇಶವನ್ನು ಯತಾವತ್ತಾಗೆ ರಾಯಚೂರು ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಿಗೂ ಪಾವತಿಸಲು ಅನುಮೋದಿಸಲಾಯಿತು. ಹಾಗೂ 2021-22ನೇ ಶೈಕ್ಷಣಿಕ ಸಾಲಿಗೆ 2ನೇ ಸೆಮಿಸ್ಟರ್‌ನ ಸ್ನಾತಕೋತ್ತರ ತರಗತಿಗಳ ಅವಶ್ಯವಿರುವ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರನ್ನು ನಿಯೋಜಿಸಲು ದಿನಾಂಕ 10.08.2022 ರಿಂದ 16.08.2022 ರವರೆಗೆ ವಾಕ್-ಇನ್-ಸಂದರ್ಶನವನ್ನು ನಡೆಸಲಾಗಿತ್ತು. ಅದರಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿವಿಧ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳನ್ನು ಒಳಗೊಂಡ ವಿಷಯ ತಜ್ಞರ ಸಮಿತಿಯ ಶಿಫಾರಸ್ಸನ್ನು ಮಾನ್ಯ ಮಾಡಿ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಭೋದನಾಕಾರ್ಯಗಳಿಗನುಸಾರ ಅತಿಥಿ ಉಪನ್ಯಾಸಕರುಗಳ ಆದೇಶಗಳನ್ನು ಹೊರಡಿಸಲು ಅನುಮೋದಿಸಲಾಯಿತು. |

23/8/22

(ಪ್ರೊ. ವಿಶ್ವನಾಥ ಎಂ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು

(ಪ್ರೊ. ಹರೀಶ್ ರಾಮಸ್ವಾಮಿ) .8.2022
ಕುಲಪತಿಗಳು ಹಾಗೂ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು